ಮಟ್ಟಕ್ಕೆ ಕೂಡ ಸರಿಯಾಗಿ ಹಂಚಿಕೆಯಾಗುತ್ತಿಲ್ಲ. ಮುಖ್ಯ ಮಂತ್ರಿಗಳು ಇದರ ಬಗ್ಗೆ ಏನು ಹೇಳಿಂತಾರೆ ?

ಶ್ರೀ ರಾಮಕೃಷ್ಣ ಹೆಗಡೆ.—ಅವರ ಬೇಡಿಕೆಯನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು.

ಗುಲ್ಬರ್ಗ ಜಿಲ್ಲೆಯಲ್ಲಿ ಹೊಸ ಆರಕ್ಷಕ ಠಾಣೆಗಳನ್ನು ತೆರೆಯುವುದು.

೨೨೫. ಶ್ರೀ ಕೆ. ಬಿ. ಶಾನಪ್ಪ (ಶಹಬಾದ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಗೃಹ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಎ) ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ನಲವಾರ್ ಹಾಗೂ ಹೇರೂರು ಗ್ರಾಮಗಳಲ್ಲಿ ಹೊಸದಾಗಿ ಆರಕ್ಷಕ ಠಾಣೆಗಳನ್ನು ತೆರೆಯುವ ಬಗ್ಗೆ ಪ್ರಸ್ತಾವಗಳೇನಾದರೂ ಇವೆಯೇ ?

ಬಿ) ಹಾಗಿದ್ದಲ್ಲಿ ಯಾವಾಗ ಈ ಆರಕ್ಷಕ ಠಾಣೆಗಳನ್ನು ತೆರೆಯಲಾಗುವುದು.

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ಎ) ಗುಲ್ಬರ್ಗಾ ಜಿಲ್ಲೆಯ ನಲವಾರ್ ಮತ್ತು ಹೆರೂರು-ಬಿ ಗ್ರಾಮಗಳಲ್ಲಿ ಆರಕ್ಷಕ ಠಾಣೆಗಳನ್ನು ಸ್ಥಾಪಿಸುವ ಪ್ರಸ್ತಾವವಿಲ್ಲ. ಆದಾಗ್ಯೂ ನಲವಾರ್ ಮತ್ತು ಹೆರೂರು-ಬಿ ಗ್ರಾಮಗಳಲ್ಲಿ ಆರಕ್ಷಕ ಉಪಠಾಣೆಗಳನ್ನು (Out post) ಪರಿಶೀಲನೆಯಲ್ಲಿದೆ.

ಬಿ) ಸಾಧ್ಯವಾದಷ್ಟು ಬೇಗ ಈ ಉಪಠಾಣೆಗಳನ್ನು (Out post) ತೆರೆಯಲಾಗುವುದು.

ಶ್ರೀ ಯು. ಭೂಪತಿ (ಶ್ರೀ ಕೆ. ಬಿ. ಶಾಣಪ್ಪನವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ಚಿತ್ತಾಪುರ ತಾಲ್ಲೂಕಿನ ನಲ್ವಾಲೆ ಗ್ರಾಮದಲ್ಲಿ ಅಪರಾಧಿಗಳ ಸಂಖ್ಯೆ ಬಹಳಷ್ಟಿ ಜಾಸ್ತಿಯಾಗಿದೆ. ಆದ್ದರಿಂದ ಅಲ್ಲಿ ಆರಕ್ಷಕ ಠಾಣೆಯನ್ನು ತೆರೆಯಬೇಕು. ಉಪಠಾಣೆಯನ್ನು ತೆರೆಯುವುದರಿಂದ ಪ್ರಯೋಜನವಾಗುವುದಿಲ್ಲ. ಆದಕಾರಣ ಮಾನ್ಯ ಮಂತ್ರಿಗಳು ಇದರ ಬಗ್ಗೆ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸುತ್ತಿದ್ದೇನೆ.

ಶ್ರೀ ಬಿ. ರಾಚಯ್ಯ.—ಅಲ್ಲಿಯ ಜನಸಂಖ್ಯೆ ೧೩೦೦. ಅಲ್ಲಿರುವ ಕಲ್ಲುಗಣಿ ಕೆಲಸಗಾರರ ಸಂಖ್ಯೆ ೫೦೦. ಕಾರ್ಮಿಕರು ಇದ್ದ ಕಡೆ ಗಲಾಟೆಗಳು ಇರುತ್ತವೆ. ಎಲ್ಲಾ ಕಡೆ ಒಂದೇ ಸಾರಿ ಪೋಲೀಸ್ ಸ್ಟೇಷನ್‌ಗಳನ್ನು ತೆರೆಯುವುದು ಕಷ್ಟವಾಗಬಹುದು. ಈಗ ಔಟ್‌ಪೋಸ್ಟ್ ಕೊಡುವುದಕ್ಕೆ ಪ್ರಸ್ತಾಪ ಬಂದಿದೆ. ಈಗ ಇದನ್ನು ಮಾಡೋಣ. ನಂತರ ಪೋಲೀಸ್ ಸ್ಟೇಷನ್ ಬಗ್ಗೆ ಬೇಕಾದರೆ ಯೋಚನೆ ಮಾಡೋಣ.

ಕರ್ನಾಟಕ ಆಹಾರ ನಾಗರೀಕ ಸರಬರಾಜು ನಿಗಮದವರ ಚಟುವಟಿಕೆಗಳು.

೧೦. ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಆಹಾರ ಮತ್ತು ನಾಗರೀಕಸರಬರಾಜು ಮಂತ್ರಿಗಳು ದಯವಿಟ್ಟು ಉತ್ತರಿಸುವಿರೆ ?

ಎ) ಕರ್ನಾಟಕ ರಾಜ್ಯ ಆಹಾರ ನಿಗಮವು ಲೆವಿ ಪದ್ಧತಿ ಮತ್ತು ಪೂರುಕಟ್ಟೆ ಮೂಲಕ ಸಂಗ್ರಹಿಸಿದ ಆಹಾರ ಧಾನ್ಯಗಳ ಒಟ್ಟು ಪ್ರಮಾಣವು ಎಷ್ಟು;

ಆ) ಭಾರತ ಸರ್ಕಾರವು ನಮ್ಮ ರಾಜ್ಯಕ್ಕೆ ಪೂರೈಸುವ ಆಹಾರ ಧಾನ್ಯಗಳ ಪ್ರಮಾಣವೆಷ್ಟು, ಮತ್ತು ಯಾವ ಬೆಲೆಗಳಲ್ಲಿ;

ಇ) ಖಾಸಗಿ ನ್ಯಾಯಬೆಲೆ ಅಂಗಡಿಗಳವನ್ನು ರದ್ದುಗೊಳಿಸಿದ ನಂತರ ಸಮರ್ಪಕ ಮತ್ತು ದಕ್ಷ ವಿತರಣೆಗಾಗಿ ಕೈಗೊಂಡ ಕ್ರಮಗಳು ಯಾವುವು;

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಎ) ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದಿಂದ ದಿನಾಂಕ ೧.೭.೮೫ರ ವರೆಗೆ ಸಂಗ್ರಹವಾದ ಪ್ರಮಾಣ :

೧) ಲೆವಿ ಮುಕ್ತ ಅಕ್ಕಿ ೫೫,೯೧೦ ಮೆ. ಟನ್.
೨) ಭತ್ತ ೪೪,೬೧೯ ಮೆ. ಟನ್.

೫.೭.೧೫೫೯ ರವರೆಗೆ

೩) ರಾಗಿ ೨,೦೪೦ ಮೆ. ಟನ್.
೪) ಜೋಳ ೧,೭೪೮ ಮೆ. ಟನ್.

೮) ಅಕ್ಕಿ:

ಏಪ್ರಿಲ್ ೧೯೮೪ ರಿಂದ
ಫೆಬ್ರುವರಿ ೧೯೮೫ } ತಿಂಗಳಿಗೆ ೨೦,೦೦೦ ಮೆ. ಟನ್.
ಮಾರ್ಚ್ ೧೯೮೫ ರಿಂದ
ಮೇ ೧೯೮೫ } ತಿಂಗಳಿಗೆ ೨೫,೦೦೦ ಮೆ. ಟನ್.
ಜೂನ್ ೧೯೮೫ ೩೦,೦೦೦ ಮೆ. ಟನ್.
ಜುಲೈ ೧೯೮೫ ೩೨,೦೦೦ ಮೆ. ಟನ್.

ಗೋಧಿ :

ಸಾರ್ವಜನಿಕ ವಿತರಣೆಗಾಗಿ ತಿಂಗಳಿಗೆ ೧೫,೦೦೦ ಮೆ. ಟನ್.
ರೋಲರ್ ಫ್ಲೋರ್ ಮಿಲ್‌ಗಳಿಗಾಗಿ ತಿಂಗಳಿಗೆ ೪೬,೨೯೦ ಮೆ. ಟನ್.

ಬೆಲೆ ಕ್ವಿಂಟಾಲ್‌ಗೆ ಅಕ್ಕಿ :

ಅತ್ಯುತ್ತಮ ... ರೂ. ೨೩೫ ಕ್ವಿಂಟಾಲ್‌ಗೆ
ಉತ್ತಮ ... ರೂ. ೨೨೦ ಕ್ವಿಂಟಾಲ್‌ಗೆ
ಸಾಮಾನ್ಯ ... ರೂ. ೨೦೫ ಕ್ವಿಂಟಾಲ್‌ಗೆ

ಗೋಧಿ :

ಸಾರ್ವಜನಿಕ ವಿತರಣೆಗಾಗಿ ರೂ. ೧೭೨ ಕ್ವಿಂಟಾಲ್‌ಗೆ.

ರೋಲರ್ ಫ್ಲೋರ್ ಮಿಲ್‌ಗಳಿಗಾಗಿ ರೂ. ೧೭೨ ಕ್ವಿಂಟಾಲ್‌ಗೆ.

೧೫) ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದ ಮೂಲಕ ೨೩೦ ಹೊಸ ನ್ಯಾಯ ಬೆಲೆ ಅಂಗಡಿಗಳನ್ನು ಮತ್ತು ಸಹಕಾರ ಸಂಘಗಳ ಮೂಲಕ ೬೫ ಹೊಸ ನ್ಯಾಯ ಬೆಲೆ ಅಂಗಡಿಗಳನ್ನು ತೆರೆಯಲಾಗಿದೆ. ಸುಮಾರು ೨೨೦ ಪ್ರಕರಣಗಳಲ್ಲಿ ಹೊಸಗಿ ನ್ಯಾಯ ಬೆಲೆ ಅಂಗಡಿಗಳಿಗೆ ನೀಡಿದ ಪರವಾನಗಿಯನ್ನು ಅಮಾನತ್ತಿನಲ್ಲಿಡಲಾಗಿದೆ ಅಥವಾ ರದ್ದುಗೊಳಿಸಲಾಗಿದೆ.

ಬಡ ಕುಟುಂಬಗಳಿಗೆ ಕೆ. ಜಿ. ಗೆ ೨ ರೂ. ನಂತೆ ಅಕ್ಕಿ ಸರಬರಾಜು ಮಾಡುವ ಆಶಾದಾಯಕ ಯೋಜನೆಯ ದೃಷ್ಟಿಯಿಂದ ಹಾಗೂ ರಾಜ್ಯದ ಅದರಲ್ಲೂ ವಿಶೇಷವಾಗಿ ಗ್ರಾಮೀಣ ಭಾಗಗಳಲ್ಲಿ ಸಮರ್ಥ ಸಹಕಾರ ಸಂಘಗಳನ್ನು ಗುರುತಿಸಲು ತೊಂದರೆ ಕಂಡುಬಂದಿರುವ ಕಾರಣ ಪ್ರಸ್ತುತ ವರ್ಷದಿಂದ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಖಾಸಗಿ ವ್ಯಕ್ತಿಗಳಿಗೂ ನ್ಯಾಯ ಬೆಲೆ ಅಂಗಡಿಗಳನ್ನು ನಡೆಸಲು ಅನುಮತಿ ಕೊಡುವ ಬಗ್ಗೆ ಸರ್ಕಾರ ನಿರ್ಧಾರ ತೆಗೆದುಕೊಂಡಿದೆ.

ಆಹಾರ ಮತ್ತು ಕಂದಾಯ ಇಲಾಖೆಯ ಜಾಗೃತ ಅಧಿಕಾರಿಗಳು ಕಾಲ ಕಾಲಕ್ಕೆ ಹಾಗೂ ಅನೀರಿಕ್ಷಿತ ತಪಾಸಣೆಗಳನ್ನು ನಡೆಸಿ ಅಗತ್ಯ ವಸ್ತುಗಳು ಸಮರ್ಪಕ ವಿತರಣೆಯಾಗುವಂತೆ ನೋಡಿಕೊಳ್ಳುತ್ತಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ಸ್ವಾಮಿ ಲೆವಿ ಪದ್ಧತಿಯಿಂದ ಎಷ್ಟು ಸಂಗ್ರಹಣೆ ಮಾಡಿದ್ದೀರಿ ಎಂದು ಹೇಳಿರುವುದಕ್ಕೆ ಉತ್ತರ ಹೇಳಲಿಲ್ಲ. ಮುಕ್ತ ರೀತಿಯಿಂದ ಖರೀದಿ ಮಾಡಿರುವುದನ್ನು ಮಾತ್ರ ಹೇಳಿದ್ದೀರಿ. ಅದರ ದರಗಳು ಏನು ? ಹೈದರಾಬಾದಿಗೆ ಕಳುಹಿಸಿದ್ದ ಕಮಿಟಿಯ ನಿರ್ಧಾರ ಏನಾಯಿತು ? ಅಲ್ಲಿ ಖರೀದಿ ಮಾಡಿದ್ದೀರೋ ಮಾಡಲಿಲ್ಲವೋ ? ಎರಡನೆಯದಾಗಿ, ಈ ಮೊದಲೇ ನಿರ್ಧಾರ ಮಾಡಿ ಪ್ರಕಟಣೆಗಳನ್ನು ಕೊಟ್ಟಂತೆ ಎಲ್ಲ ಹಳ್ಳಿಗಳಲ್ಲಿ ಸಹಕಾರ ಸಂಘಗಳ ಮುಖಾಂತರ ಹಂಚುತ್ತೇವೆಂದು ಹೇಳಿದ್ದಿರಿ. ಈಗ ಆ ವಿಚಾರ ಏನಾಯಿತು ? ಅಲ್ಲಿರುವ ಎಲ್ಲ ಸಹಕಾರ ಸಂಘಗಳು ದಿವಾಳಿಯಾಗಿದೆಯೆ ? ಅಥವಾ ನಿರ್ಧಾರ ಬದಲಾವಣೆ ಮಾಡುವುದಕ್ಕೆ ಕಾರಣವಿದ್ದು ಆ ಕಾರಣದಿಂದ ಖಾಸಗಿ ಜನರ ಮೊರೆ ಹೋಗಿದ್ದೀರಾ ?

ಶ್ರೀ ಜಿ ಬಸವಣ್ಣಪ್ಪ —ಸನ್ಮಾನ್ಯ ಅಧ್ಯಕ್ಷರೆ, ಪ್ರಸ್ತುತ ಸಾಲಿನಲ್ಲಿ ೧೯೬೪-೬೫ ರಿಂದ ಭಾರತದ ಆಹಾರ ನಿಗಮ ರಾಜ್ಯದಲ್ಲಿ ಲೆವಿ ಸಂಗ್ರಹಣೆ ಮಾಡುವ ಏಕೈಕ ಘಟಕವಾಗಿದೆ. ಕಾಪು ದಾಸ್ತಾನನ್ನು ಕೆ. ಎಫ್. ಸಿ ಎಸ್. ಸಿ. ಯಿಂದ ಸಂಗ್ರಹ ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರದ ಆದೇಶದ ಮೇರೆಗೆ ಇದರಿಂದ ಲೆವಿ ವಸೂಲು ಮಾಡುವುದನ್ನು ರದ್ದು ಮಾಡಲಾಗಿದೆ. ಭಾರತದ ಆಹಾರ ನಿಗಮದ ಮೂಲಕ ೯೫ ಸಾವಿರ ಟನ್ ವಸೂಲು ಮಾಡಲಾಗಿದೆ. ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದಿಂದ ಲೆವಿ ಮುಕ್ತ ಅಕ್ಕಿಯನ್ನು ೫೫, ೯೧೦ ಮೆಟ್ರಿಕ್ ಟನ್ ವಸೂಲು ಮಾಡಿದ್ದೇವೆ. ಇಲ್ಲಿಯವರೆಗೆ ಒಟ್ಟು ೬೦, ೯೩೩ ಮೆಟ್ರಿಕ್ ಟನ್ ವಸೂಲು ಮಾಡಲಾಗಿದ್ದು ಭತ್ತ ಳಳ, ೬೧೯ ಮೆಟ್ರಿಕ್ ಟನ್ ಮುಕ್ತ ಮಾರುಕಟ್ಟೆಯಲ್ಲಿ ಪರ್ಚೇಸ್ ಮಾಡಿದ್ದೇವೆ. ಎರಡನೆಯದಾಗಿ, ಆಂಧ್ರಕ್ಕೆ ನಮ್ಮ ಅಧಿಕಾರಿಗಳ ತಂಡವನ್ನು ಕಳುಹಿಸಿದ್ದು ನಿಜ. ಏತಕ್ಕೋಸ್ಕರ ಎಂದರೆ ಎರಡು ರೂಪಾಯಿ ಒಂದು ಕೆ. ಜಿ. ಅಕ್ಕಿ ಏನು ಅಲ್ಲಿ ಕೊಡುತ್ತಿದ್ದಾರೆ. ಅದರ ವಿತರಣಾ ಪದ್ಧತಿಯನ್ನು ಅಧ್ಯಯನ ಮಾಡುವುದಕ್ಕೆ ಕಳುಹಿಸಲಾಗಿತ್ತು. ಡೆವಲಪ್‌ಮೆಂಟ್ ಕಮಿಷನರ್ ಅವರ ನೇತೃತ್ವದಲ್ಲಿ ಅಧ್ಯಯನ ತಂಡವನ್ನು ಕಳುಹಿಸಿ ಕೊಡಲಾಗಿತ್ತು. ಅವರು ಅಧ್ಯಯನ ಮಾಡಿ ರಿಪೋರ್ಟ್ ಕೊಟ್ಟಿದ್ದಾರೆ. ಅದರ ಆಧಾರದ ಮೇಲೆ ನಮ್ಮ ಪರಿಸ್ಥಿತಿಯನ್ನು ಅರಿತುಕೊಂಡು ಅದಕ್ಕನುಗುಣವಾಗಿ ರೂಪು ರೇಷೆಗಳನ್ನು ಮಾಡಿದ್ದೇವೆ. ೩೫೦೦ ರೂಪಾಯಿ ಒಳಗೆ ವಾರ್ಷಿಕ ವರಮಾನ ಇರುವ ಫಲಾನುಭವಿಗಳಿಗೆ ಎರಡು ರೂಪಾಯಿಗೆ ಅಕ್ಕಿಯನ್ನು ಕೊಡತಕ್ಕ ಕಾರ್ಯಕ್ರಮ ಮಾಡುತ್ತಿದ್ದೇವೆ.

ಶ್ರೀ ಕೆ. ಎಚ್. ಪಾಟೀಲ್.—೯೫ ಸಾವಿರ ಟನ್ ಲೆವಿ ವಸೂಲು ಎಫ್. ಸಿ. ಐ. ಮುಖಾಂತರ ಮಾಡಿದ್ದೇವೆ. ಎಂದು ಹೇಳಿದ್ದಾರೆ. ಹಿಂದೆ ಎರಡೂವರೆ ಲಕ್ಷ ಮೂರು ಲಕ್ಷ ಟನ್‌ವರೆಗೆ ವಸೂಲಿಯಾಗುತ್ತಿತ್ತು. ಈಗ ಇದು ಕಡಿಮೆಯಾಗಿರುವುದಕ್ಕೆ ಕಾರಣ ಏನು ? ಎರಡನೆಯದಾಗಿ ನಮ್ಮ ರಾಜ್ಯಕ್ಕೆ ಬೇಕಾಗುವಂಥ ಆಹಾರ ಧಾನ್ಯ ನಿಮ್ಮ ಅಭಿಪ್ರಾಯದ ಪ್ರಕಾರ ಎಷ್ಟು ? ತಿಂಗಳಿಗೆ ಅಥವಾ ವರ್ಷಕ್ಕೆ ಎಷ್ಟು ಬೇಕಾಗುತ್ತದೆ ?

ಶ್ರೀ ಜಿ. ಬಸವಣ್ಣಪ್ಪ.—ಸನ್ಮಾನ್ಯ ಅಧ್ಯಕ್ಷರೆ, ಎಫ್. ಸಿ. ಐ. ಲೆವಿ ಟಾರ್ಜೆಟ್ ೨ ಲಕ್ಷ ಟನ್. ಆದರೆ ವಸೂಲು ಮಾಡಿರುವುದು ೯೫ ಸಾವಿರ ಟನ್. ಎಷ್ಟು ಪ್ರಮಾಣದಲ್ಲಿ ಮಾಡಬೇಕಾಗಿತ್ತೋ ಅಷ್ಟು ವಸೂಲು ಮಾಡುಲು ಆಗಲಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೇನೆ ಲೋಕಸಭಾ ಚುನಾವಣೆ ಮತ್ತು ರಾಜ್ಯ ವಿಧಾನ ಸಭಾ ಚುನಾವಣೆಗಳು ಬಂದಿದ್ದರಿಂದ, ಅಧಿಕಾರಿಗಳು ಚುನಾವಣೆಯಲ್ಲಿ ಭಾಗಿಯಾಗಿದ್ದರಿಂದ ಅಷ್ಟು ಪ್ರಮಾಣದಲ್ಲಿ ವಸೂಲು ಮಾಡಲು ಆಗಲಿಲ್ಲ ಎರಡನೆಯದಾಗಿ, ಜಿಲ್ಲಾಧಿಕಾರಿಗಳ ಸಭೆ ಕರೆದೂ ಎರಡು ಲಕ್ಷ ಟನ್ ಟಾರ್ಜೆಟ್ ರೀಚ್ ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ. ಫಲಾನುಭವಿಗಳಿಗೆ ಕೊಡಲು ಪ್ರತಿ ತಿಂಗಳು ೫೦ ಸಾವಿರ ಟನ್ ಅಕ್ಕಿ ಬೇಕಾಗುತ್ತದೆ. ೩೦ ಸಾವಿರ ಟನ್ ಮಾತ್ರ ಕೇಂದ್ರ ಸರ್ಕಾರ ಕೊಡುತ್ತಿತ್ತು. ಈಗ ಜುಲೈನಲ್ಲಿ ೨ ಸಾವಿರ ಟನ್ ಜಾಸ್ತಿ ಮಾಡಿದೆ. ಅಂದರೆ ೩೨ ಸಾವಿರ ಟನ್ ಬಂದ ಹಾಗಾಯಿತು. ಆದರೂ ಸುಮಾರು ೧೩ ಸಾವಿರ ಟನ್ ಕೊರತೆ ಬರುತ್ತದೆ. ಅದನ್ನು ಕೊಡಿ ಎಂದು ಕೇಳುತ್ತಿದ್ದೇವೆ. ೧೫ ಸಾವಿರ ಟನ್ ಕಾಪು ದಾಸ್ತಾನಿರುವುದರಿಂದ ನಮಗೆ ಅಕ್ಕಿಯ ಕೊರತೆ ಇಲ್ಲ. ಆದ್ದರಿಂದ ಬೇರೆ ರಾಜ್ಯದಿಂದ ಕೊಳ್ಳುವ ಪರಿಸ್ಥಿತಿ ಉದ್ಭವವಾಗುವುದಿಲ್ಲ.